ಕೆಟ್ಟವರು ಇದ್ದರು. ನಮ್ಮ ದೇಶ ಇಂತಹ ಕೆಟ್ಟತನಕ್ಕೆ ಕಾರಣವಾಯಿತು. ಇದು ಮತ್ತೆ ಯಾವಾಗಲೂ ಆಗಬಾರದು. ಜೋಪಾನ – ಇದು ಈಗಿನ ಸ್ಥಿತಿ. ಆದರೂ ಹಿಟ್ಲರ್ ಮತ್ತು ಆತನ ಸ್ನೇಹಿತರ ಬಗ್ಗೆ ಹಗುರವಾದ ಜೋಕ್ಸ್ ಮಾಡಬಾರದು. ಅದು ಕೆಟ್ಟ ಅಭಿರುಚಿ ಎಂಬ ಭಾವನೆಯಿದೆ. ಇದು ನಾನು ಹೇಳುತ್ತಿರುವುದು ಪಶ್ಚಿಮ ಜರ್ಮನಿಯಲ್ಲಿ. ಪೂರ್ವ ಜರ್ಮನಿಯ ಕಥೆ ಸ್ವಲ್ಪ ಬೇರೆಯಿದೆ.

◆ **ಅಲ್ಲಿ ನಿಯೊ ನಾಜಿವಾದ ಹರಡುತ್ತಿದೆ ಎಂದು ಕೇಳಿದೆ. ನಾಜಿಗಳನ್ನು ವಿರೋಧಿಸಿದ್ದ ಕಮ್ಯುನಿಸ್ಟರು ಆಳಿದ ಕಡೆಯಲ್ಲೇ ನಾಜಿಜಂ ಬೆಳೆಯುತ್ತಿದೆ. ಆಶ್ಚರ್ಯ.**

ಪೂರ್ವ ಜರ್ಮನಿಯಲ್ಲಿ ಇದಕ್ಕೆ ಕೆಲವು ಚಾರಿತ್ರಿಕ ಕಾರಣಗಳಿವೆ. ಎರಡನೇ ಮಹಾಯುದ್ಧದ ನಂತರ ಅಲ್ಲಿ ಹೊಸ ತರಹದ ಕಮ್ಯುನಿಸ್ಟ್ ಡಿಕ್ಟೇಟರ್‌ಶಿಪ್ ಬಂತು. ಪಶ್ಚಿಮದಲ್ಲಿ ನಡೆದಂತೆ ಹಿಟ್ಲರ್ ಕಾಲದ ಬಗ್ಗೆ ಮುಕ್ತವಾದ ಚರ್ಚೆ ನಡೆಯಲಿಲ್ಲ. 1989ರಲ್ಲಿ ಕಮ್ಯುನಿಸ್ಟ್ ಕಾಲ ಮುಗಿಯಿತು. ಎರಡೂ ಜರ್ಮನಿಗಳು ಒಂದಾದವು. ಪೂರ್ವ ಜರ್ಮನಿ ಸ್ವಲ್ಪ ಹಿಂದುಳಿದ ಪ್ರದೇಶ. ಕಮ್ಯುನಿಸ್ಟ್ ಆಡಳಿತದಲ್ಲಿ ವ್ಯಕ್ತಿಸ್ವಾತಂತ್ರ್ಯ ಇರಲಿಲ್ಲ. ಎಲ್ಲಕ್ಕೂ ಒಂದು ಯೋಜನೆ ಇದೆ. ನೀವು ಯೋಚನೆ ಮಾಡುವ ಆವಶ್ಯಕತೆ ಇಲ್ಲ. ಪಾರ್ಟಿನೆ ಮಾಡುತ್ತೆ ನಿಮಗೋಸ್ಕರ. ಎವೆರಿತಿಂಗ್ ಈಸ್ ಸ್ಟೇಟ್ ಕಂಟ್ರೋಲ್ಡ್. ಆದರೆ, ಒಂದು ದಿನ ಇದ್ದಕ್ಕಿದ್ದಂತೆ ವ್ಯಕ್ತಿಸ್ವಾತಂತ್ರ್ಯ ಬಂತು. ಅದರಲ್ಲಿ ಏನು ಮಾಡಬೇಕು ಅಂತ ಯಾರಿಗೂ ಗೊತ್ತಿರಲಿಲ್ಲ. ಅಭ್ಯಾಸ ಕಳೆದುಹೋಗಿತ್ತು. 'ಓ ನಮ್ಮ ಜೀವನಕ್ಕೆ ನಾವೇ ಸ್ವತಃ ಜವಾಬ್ದಾರರು. ನಾವೇ ತೀರ್ಮಾನ ಮಾಡಬೇಕು.' ಹೊಸ ಕ್ಯಾಪಿಟಲಿಸ್ಟ್ ವಾತಾವರಣದಲ್ಲಿ ಹೇಗೆ ಜೀವನ ಮಾಡಬೇಕು ಅಂತ ಗೊತ್ತಿಲ್ಲ. ಆರ್ಥಿಕ ಸಾಮಾಜಿಕ ತೊಂದರೆಗಳು ಇರುವವರೆಗೂ ಅತೃಪ್ತಿ ಹುಟ್ಟಿತ್ತು. ಒಂದು ತರಹದ ಭಾವುಕತೆ. ಕಮ್ಯುನಿಸ್ಟ್ ಕಾಲದಲ್ಲಿ ನಮಗೆ ಇಂಥ ತೊಂದರೆಗಳು ಇರಲಿಲ್ಲ. ಆದರೆ, ಸ್ವಾತಂತ್ರ್ಯವೂ ಇರಲಿಲ್ಲ. ಸರ್ವಾಧಿಕಾರ ಅಷ್ಟು ಕೆಟ್ಟದಲ್ಲ. ಹಿಟ್ಲರ್ ಕಾಲ ಅಷ್ಟು ಕೆಟ್ಟದಾಗಿರಲಿಲ್ಲ. ಅದು ನಮ್ಮ ದೇಶದ ಪ್ರಾಬಲ್ಯ, ಹಿರಿಮೆ ಇತ್ಯಾದಿ ಏನೇನೊ ಸೆಂಟಿಮೆಂಟ್ಸ್ ಕೆಲವು ಕಡೆ ಹುಟ್ಟಿದೆ.

> ಇತ್ತೀಚೆಗೆ ಸಂಸ್ಕೃತ ಬ್ರಾಹ್ಮಣರ ಭಾಷೆ ಆಗಿರಬಹುದು. ಆದರೆ, ಹಿಂದಿನ ಕಾಲದಲ್ಲಿ ಹಾಗೆ ಇರಲಿಲ್ಲ. ಅದು ಎಲ್ಲ ವಿದ್ವಾಂಸರ ಭಾಷೆಯಾಗಿತ್ತು. ಮುಸ್ಲಿಂ ಸಂಸ್ಕೃತ ಪುರಾಣಗಳೂ ಉಂಟು. ಸಂಸ್ಕೃತ ಅಷ್ಟು ಸಾರ್ವತ್ರಿಕ ಆಗಿತ್ತು.

◆ **ನಿಯೊ ನಾಜಿಗಳ ಗುರಿ ಯಾರು?**

ಟರ್ಕಿಯವರು. ಸ್ಪಷ್ಟವಾಗಿ ಕಾಣಿಸುವಂತಹ ಎಲ್ಲ ವಿದೇಶಿಗರು. ಸುದೈವದಿಂದ ಅದು ಕೆಲವು ಪ್ರದೇಶಗಳಿಗೆ ಸೀಮಿತವಾಗಿದೆ.

◆ **ಮ್ಯೂನಿಕ್ಕಿನಲ್ಲಿ ಇಪ್ಪತ್ತು ದಿನಗಳಿಂದ ಓಡಾಡ್ತಿದೇವೆ. ಆದರೆ, ಬಿಳಿಯರು ನಮ್ಮನ್ನು ವಿಚಿತ್ರವಾಗಿ ನೋಡಿದ್ದು ಕಾಣಲಿಲ್ಲ.**